# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | **2470** |
| ಸದಸ್ಯರ ಹೆಸರು | **ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ: | **23.03.2022** |
| ಉತ್ತರಿಸುವ ಸಚಿವರು: | **ಲೋಕೋಪಯೋಗಿ ಸಚಿವರು** |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಡಗು ಜಿಲ್ಲೆಯ, ಬಿಟ್ಟಂಗಾಲದಿಂದ ಬಿರುನಾಣಿಗೆ ಕುಟಿಯಾಲದ ಮೂಲಕ ಸಂಪರ್ಕ ಕಲ್ಪಿಸುವ ಲೋಕೋಪಯೋಗಿ ರಸ್ತೆ ಅನುಮೋದನೆಗೊಂಡ ವರ್ಷ ಯಾವುದು.? | • ಕೊಡಗು ಜಿಲ್ಲೆ ಬಿಟ್ಟಂಗಾಲದಿಂದ ಕೂಟಿಯಾಲದವರೆಗಿನ ಸರಪಳಿ 0.00 ರಿಂದ 13.60 ಕಿ.ಮೀ ವರೆಗಿನ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಕೂಟಿಯಾಲದಿಂದ ಬರಪೊಳೆ ಸೇತುವೆ ಮುಖಾಂತರ ಕೂಡು ರಸ್ತೆ ಮೂಲಕ ಬಿರುನಾಣಿಗೆ ಸಂಪರ್ಕಿಸುವ ರಸ್ತೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಒಳಪಡುತ್ತದೆ. ಬರಪೊಳೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಆರ್.ಐ.ಡಿ.ಎಫ್-3ರಡಿ ಯಲ್ಲಿ ರೂ.69.55 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಯನ್ನು ಕೈಗೊಂಡು ದಿನಾಂಕ:30.08.2003ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.<br>• ಸದರಿ ಬರಪೊಳೆ ಸೇತುವೆಯಿಂದ ಬಿರುನಾಣಿ ಸಂಪರ್ಕಿಸುವ ಕೂಡು ರಸ್ತೆ (ಗ್ರಾಮೀಣ ರಸ್ತೆ) ನಿರ್ಮಿಸುವ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ 2004-2005ನೇ ಸಾಲಿನಲ್ಲಿ ನಬಾರ್ಡ್ ಆರ್ಥಿಕ ಸಹಾಯಧನ ಆರ್.ಐ.ಡಿ.ಎಫ್-10ರ ಅಡಿಯಲ್ಲಿ ರೂ.93.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಮಂಜೂರಾತಿಯಾಗಿರುತ್ತದೆ.<br>• ಮಂಜೂರಾದ ಕಾಮಗಾರಿಯನ್ನು ದಿನಾಂಕ:22-03-2007 ರಂದು ಪ್ರಾರಂಭಿಸಲಾಗಿ 1.00 ಕಿ.ಮೀ ರಸ್ತೆ ಫಾರ್ಮೇಶನ್ ಕಾಮಗಾರಿಯು ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ವಲಯ ಅರಣ್ಯ ಅಧಿಕಾರಿಗಳು, ಪೊನ್ನಂಪೇಟೆ ವಲಯ ಇವರ ಸೂಚನೆಯ ಮೇರೆಗೆ ಕಾಮಗಾರಿ ನಡೆಯುವ ಸ್ಥಳವು ಬ್ರಹ್ಮಗಿರಿ ವನ್ಯಜೀವಿ ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತಿರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. |
| ಆ) | ಸದರಿ ಕಾಮಗಾರಿಗೆ ಮಂಜೂರಾಗಿರುವ, ಬಿಡುಗಡೆಯಾಗಿರುವ ಹಾಗೂ ಇದುವರೆಗೆ ವಿನಿಯೋಗಿಸಿರುವ ಅನುದಾನದ ವಿವರಗಳೇನು? ಕಾಮಗಾರಿಯ ಪ್ರಗತಿ | ಅಂದಿನ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 06-02-2017 ರಂದು ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಅರಣ್ಯ ಪ್ರದೇಶದ |

| | | |
|---|---|---|
| | ಪ್ರಸ್ತುತ ಯಾವ ಹಂತದಲ್ಲಿದೆ.? | ಬರಪೊಳೆಯಲ್ಲಿ ಸೇತುವೆ ಮತ್ತು ಕೂಡು ರಸ್ತೆ ನಿರ್ಮಾಣ ಕಾಮಗಾರಿ ಕುರಿತು ನಡೆದ ಸಭೆಯಲ್ಲಿ, ಪ್ರಸ್ತಾಪಿಸಿರುವ ರಸ್ತೆ ಪ್ರದೇಶವು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತಿದ್ದು, ಸೇತುವೆ ಮತ್ತು ರಸ್ತೆಯ ನಿರ್ಮಾಣ ಕಾರ್ಯವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕೈಗೊಳ್ಳಬೇಕಾಗುತ್ತದೆಂದು ನಿರ್ಣಯಿಸಲಾಗಿದೆ. |
| ಇ) | ಸದರಿ ಕಾಮಗಾರಿಯು ಬಹುಕಾಲದಿಂದ ಸ್ಥಗಿತಕೊಂಡಿದೆಯೇ.? ಅದಕ್ಕೆ ಕಾರಣವಾಗಿರುವ ಅಂಶಗಳೆನು.? | |
| ಈ) | ಸ್ಥಗಿತಗೊಳ್ಳಲು ಕಾರಣವಾದ ಅಡೆತಡೆಗಳನ್ನು ಪರಿಹರಿಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು.? | |
| ಉ) | ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಯಾವ ಕಾಲಮಿತಿಯೊಳಗೆ ಲೋಕಾರ್ಪಣೆಗೊಳಿಸಲಾಗುವುದು.? | |

ಲೋಇ 48 ಸಿಕ್ಯೂಎನ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು